

ಶೃಂಗೇರಿಯ ವಿದ್ಯಾಶಂಕರ ದೇವಸ್ಥಾನ

**ಶ್ರೀಶಂಕರಾಚಾರ್ಯರು ಪ್ರತಿಷ್ಠಾಪಿಸಿದ ಚತುರಾಮ್ನಾಯ ಪೀಠಗಳಲ್ಲಿ ದಕ್ಷಿಣ ಭಾರತವನ್ನು ಪ್ರತಿನಿಧಿಸುವ ಶಾರದಾಪೀಠವು ಕನ್ನಡ ನೆಲದಲ್ಲಿರುವುದು ಕನ್ನಡಿಗರಿಗೆಲ್ಲರಿಗೂ ಹೆಮ್ಮೆಯ ವಿಷಯ. ಈ ಪುಣ್ಯಕ್ಷೇತ್ರದ ಸ್ಥೂಲಪರಿಚಯ ಮಾಡಿಕೊಟ್ಟಿರುವ ಚೆನ್ನೈ ನಗರದ ನಿವಾಸಿಯಾದ ಲೇಖಕಿ, ತಮಿಳು ಮತ್ತು ಕನ್ನಡಗಳಲ್ಲಿ ನುರಿತ ಬರಹಗಾರರು ಮತ್ತು ಅನುವಾದಕರು.**

**ಪ**ವಿತ್ರವಾದ ನಮ್ಮ ಭಾರತ ದೇಶ, ಅನೇಕ ಸಿದ್ಧಾಂತಗಳನ್ನು ವಿಶ್ವಕ್ಕೆ ಉಡುಗೊರೆಯಾಗಿ ನೀಡಿದೆ. **ದೇವರು, ಜಗತ್ತು** ಮತ್ತು **ಜೀವಿ** ಎಂಬ ಮೂರು ವಿಷಯಗಳನ್ನು ಕುರಿತ ವಿವರಗಳನ್ನು, ಇವುಗಳ ನಡುವಣ ಸಂಬಂಧವನ್ನು ಅತ್ಯಂತ ಸುಸಂಬದ್ಧವಾಗಿ, ಸ್ಪಷ್ಟವಾಗಿ, ಆಳವಾಗಿ ಈ ಸಿದ್ಧಾಂತಗಳು ತಿಳಿಸುತ್ತವೆ. ಭಾರತೀಯ ದರ್ಶನಶಾಸ್ತ್ರದಲ್ಲಿ ಆರು ದರ್ಶನಗಳಿವೆ: **ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಪೂರ್ವಮೀಮಾಂಸಾ ಮತ್ತು ಉತ್ತರಮೀಮಾಂಸಾ.** ಉತ್ತರ ಮೀಮಾಂಸಾ ಅಥವಾ ವೇದಾಂತದ ತಾತ್ತ್ವಿಕ ಪ್ರಭೇದಗಳು **ಅದ್ವೈತ, ದ್ವೈತ, ವಿಶಿಷ್ಟಾದ್ವೈತ** ಎಂಬುವು. ಅದ್ವೈತ ತತ್ತ್ವವು ವಿಶ್ವಕ್ಕೆ ನಮ್ಮ ಭಾರತ ದೇಶವು ನೀಡಿರುವ ಮಹತ್ವಪೂರ್ಣವಾದ ಕೊಡುಗೆಯಾಗಿದೆ. ಈ ಸಿದ್ಧಾಂತವು ವೈಜ್ಞಾನಿಕವಾಗಿದ್ದು, ಇದರ ಅಪೂರ್ವವಾದ ಅಭಿಪ್ರಾಯಗಳಿಂದ ಮತ್ತು ನಿರ್ಣಯಗಳಿಂದ, ನಮ್ಮ ದೇಶದಲ್ಲಿ ಮಾತ್ರವಲ್ಲದೆ, ವಿದೇಶಗಳಲ್ಲಿರುವ ವಿಚಾರವಂತರನ್ನೂ ಆಕರ್ಷಿಸುವ ಶಕ್ತಿಯನ್ನು ಪಡೆದಿದೆ.

ಆದಿಶಂಕರ ಭಗವತ್ಪಾದಾಚಾರ್ಯರು ನಮ್ಮ ದೇಶದ ಶ್ರೇಷ್ಠವಾದ ಸಂಸ್ಕೃತಿ, ಬಾಳಿನಲ್ಲಿ ಒಬ್ಬ ವ್ಯಕ್ತಿ ಆಚರಿಸಬೇಕಾದ ಮೌಲ್ಯಗಳು ಮತ್ತು ಅದ್ವೈತ ಸಿದ್ಧಾಂತದ ಪ್ರಚಾರಕ್ಕಾಗಿ ನಾಲ್ಕು ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪಿಸಿದರು. ಅವೆಂದರೆ ಉತ್ತರ ಭಾರತದಲ್ಲಿ **ಬದರಿ,** ಪಶ್ಚಿಮದಲ್ಲಿ **ದ್ವಾರಕಾ,** ಪೂರ್ವದಿಕ್ಕಿನಲ್ಲಿ **ಪುರೀ** ಮತ್ತು ದಕ್ಷಿಣ ಭಾರತದ **ಶೃಂಗೇರಿ.**

ಜ್ಞಾನದಲ್ಲಿ ಎರಡು ಬಗೆ ಇದೆ. ಸಾಧಾರಣವಾದ ಲೌಕಿಕ ವಿಷಯಗಳ ಕುರಿತ ತಿಳಿವಳಿಕೆಯನ್ನು **ಅಪರಾವಿದ್ಯೆ**ಯೆಂದೂ, ಆತ್ಮನ ಸ್ವಾಭಾವಿಕವಾದ ನಿತ್ಯ, ಶುದ್ಧ, ಬುದ್ಧ, ಮುಕ್ತ ಸ್ವರೂಪದ ಅರಿವನ್ನು **ಪರಾವಿದ್ಯೆ**ಯೆಂದೂ ಕರೆಯುತ್ತಾರೆ. ಇದನ್ನೇ ಆತ್ಮವಿದ್ಯೆ, ಬ್ರಹ್ಮವಿದ್ಯೆ ಎಂದೂ ಕರೆಯುತ್ತಾರೆ. ಆತ್ಮಜ್ಞಾನದ ಮೂಲಕ ಮನುಷ್ಯನು ಮೋಕ್ಷವನ್ನು ಹೊಂದುತ್ತಾನೆ. ನಮ್ಮ ದೇಶದಲ್ಲಿ ಈ ಜ್ಞಾನವು, ಗುರುಶಿಷ್ಯ ಪರಂಪರೆಯಿಂದ ಅವಿಚ್ಛಿನ್ನವಾಗಿ ಸತತವಾಗಿ ಹರಿಯುತ್ತ ಬಂದಿದೆ. ಈ ಗುರುಪರಂಪರೆಗೆ ಶ್ರೀಸದಾಶಿವನೇ ಪ್ರಥಮ ಗುರು. ಅವನೇ ಶ್ರೀದಕ್ಷಿಣಾಮೂರ್ತಿಯ

ಸ್ವರೂಪದಲ್ಲಿ ಇದ್ದುಕೊಂಡು ಮೌನವ್ಯಾಖ್ಯಾನವನ್ನು ಮಾಡುತ್ತಾನೆ. ಗುರುಪರಂಪರೆಯನ್ನು ಕುರಿತ ಒಂದು ಶ್ಲೋಕ ಹೀಗಿದೆ:

**ಸದಾಶಿವ ಸಮಾರಂಭಾಂ ಶಂಕರಾಚಾರ್ಯ ಮಧ್ಯಮಾಂ ।**
**ಅಸ್ಮದಾಚಾರ್ಯಪರ್ಯಂತಾಂ ವಂದೇ ಗುರುಪರಂಪರಾಮ್ ॥**

"ಸದಾಶಿವನಿಂದ ಆರಂಭಗೊಂಡ ಈ ಪರಂಪರೆಗೆ ಶ್ರೀಶಂಕರಾಚಾರ್ಯರೇ ಮಧ್ಯಮರು. ಅದು ನಮ್ಮ ಆಚಾರ್ಯರವರೆಗೆ ಬೆಳೆದುಬಂದಿದೆ. ಅಂತಹ ಗುರುಪರಂಪರೆಗೆ ವಂದನೆಗಳು."

ಹೀಗಾಗಿ ಜ್ಞಾನೋಪದೇಶದ ಸಂಪ್ರದಾಯವು ಅವಿಚ್ಛಿನ್ನ ಪರಂಪರೆಯಾಗಿದೆ. ಆದಿಶಂಕರ ಭಗವತ್ಪಾದಾಚಾರ್ಯರು, ವಿಭಿನ್ನ ಮತಗಳ ಸಾಮರಸ್ಯವನ್ನು ತೋರಿಸಿಕೊಟ್ಟು, ಭಾರತ ರಾಷ್ಟ್ರದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಏಕೀಕರಣಕ್ಕೆ ಮಹತ್ತರವಾದ ಕೊಡುಗೆಯನ್ನು ನೀಡಿದ್ದಾರೆ. ಅದಲ್ಲದೆ, ನೈಜವಾದ ಆಧ್ಯಾತ್ಮಿಕ ಜ್ಞಾನವನ್ನು ಪಡೆಯುವುದಕ್ಕೆ ದಾರಿಯನ್ನು ಕೂಡ ತೋರಿಸಿದ್ದಾರೆ. ಶ್ರೀಶಂಕರರ ಅನುಪಮ ಆಧ್ಯಾತ್ಮಿಕ ಜ್ಞಾನವು, ನಮ್ಮ ದೇಶದ ತತ್ತ್ವಶಾಸ್ತ್ರ, ಸಾಹಿತ್ಯ, ನೈತಿಕ ಬದುಕು ಮತ್ತು ಮಾನವೀಯತೆಗಳ ಮೇಲೆ ಗಾಢವಾದ ಪ್ರಭಾವವನ್ನು ಬೀರಿದೆ. ಅವರು ತಮ್ಮ ೩೨ ವರ್ಷಗಳ ಜೀವಿತಕಾಲದ ಅವಧಿಯಲ್ಲಿ ೮ ಭಾಷ್ಯಗಳು, ೧೦ ಪ್ರಕರಣ ಗ್ರಂಥಗಳು, ೫೪ ಸ್ತೋತ್ರ ಗ್ರಂಥಗಳು, ೨೩ ಲಘು ಗ್ರಂಥಗಳನ್ನು ರಚಿಸಿ ಅದ್ಭುತ ಸಾಧನೆಗೈದಿದ್ದಾರೆ.

ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಪವಿತ್ರ ಕ್ಷೇತ್ರವಾದ ಶೃಂಗೇರಿ ಇದೆ. ನಿಘಂಟಿನಲ್ಲಿ 'ಕರ್ನಾಟಕ' ಎಂಬ ಪದಕ್ಕೆ ಎರಡು ಅರ್ಥಗಳನ್ನು ಕೊಡಲಾಗಿದೆ. **'ಕರ್ಣೇಷು ಅಟತಿ ಇತಿ ಕರ್ನಾಟ'** ಅಂದರೆ ಆ ಪ್ರದೇಶವನ್ನು ಆಳುತ್ತಿದ್ದ ರಾಜವಂಶದವರ ಕೀರ್ತಿ ಎಲ್ಲರ ಕಿವಿಗಳಲ್ಲಿಯೂ ಝೇಂಕಾರವಾಗುತ್ತಿತ್ತು ಎಂಬುದು ಇದರ ಅರ್ಥವಾಗಿದೆ. **'ಕರ್ಣ್ಯೆ ಅಟತಿ ಇತಿ ಕರ್ನಾಟ'** ಅಂದರೆ, ಕಿವಿಯಿಂದ ಕೇಳಲ್ಪಡುವುದು, ಶ್ರುತಿಯನ್ನು (ವೇದ) ಓದುವುದು ಮತ್ತು ವೇದಮಾರ್ಗವನ್ನು ಅನುಸರಿಸುವುದು ಎಂದರ್ಥ. ಇಲ್ಲಿನ ಜನರು ಬಹಳ ಶ್ರದ್ಧೆಯಿಂದ ವೇದಾನುಷ್ಠಾನ ಮಾಡುತ್ತಿದ್ದರು ಎಂಬುದು ಇದರ ಅರ್ಥವಾಗಿದೆ. ಈ ಎರಡು ಉದ್ಧರಣಗಳಿಂದ ಪ್ರಾಚೀನ ಕರ್ನಾಟಕದ ಶ್ರೇಷ್ಠತೆ ಮತ್ತು ವಿಶಿಷ್ಟತೆಗಳು ನಮಗೆ ತಿಳಿದುಬರುತ್ತವೆ.

ನಯನಮನೋಹರವಾದ ಪಶ್ಚಿಮ ಪರ್ವತಶ್ರೇಣಿಯ ಒಂದು ಭಾಗವಾದ ಸಹ್ಯಾದ್ರಿ ಪರ್ವತ ಸಾಲಿನಲ್ಲಿ, ಜುಳುಜುಳು ಹರಿಯುವ ತುಂಗಾನದಿಯ ತೀರದಲ್ಲಿ ಇರುವ ಪವಿತ್ರ ಕ್ಷೇತ್ರವಾದ ಶೃಂಗಾರದ ಶೃಂಗೇರಿಯು, ಅಲ್ಲಿಗೆ ಆಗಮಿಸುವವರಿಗೆ "ಬನ್ನಿ ಬನ್ನಿ" ಎಂದು ತುಂಬುಹೃದಯದಿಂದ ಸುಸ್ವಾಗತವನ್ನು ನೀಡುತ್ತದೆ. ಅರಣ್ಯಗಳು, ಸಣ್ಣಸಣ್ಣ ಗಿರಿಗಳು, ಬೆಟ್ಟಗಳು, ಮತ್ತು ಕಣ್ಮನ ಸೆಳೆಯುವ ನದಿಗಳು ಈ ಪಾವನ ಕ್ಷೇತ್ರವನ್ನು ಆವರಿಸಿ, ವೀಕ್ಷಿಸುವವರ ಮನಸ್ಸನ್ನು ಸೆಳೆಯುತ್ತವೆ. ವಿಭಾಂಡಕ ಮಹರ್ಷಿಗಳು ಈ ಸುಂದರವಾದ ವನಪ್ರದೇಶದಲ್ಲಿ ತಪಸ್ಸು ಮಾಡಿದರೆಂದು ಮಹಾಭಾರತ ವಿವರಿಸುತ್ತದೆ. ಇವರ ಸುಪುತ್ರರಾದ ಶ್ರೀಋಷ್ಯಶೃಂಗರು ಈ ಪ್ರದೇಶದಲ್ಲಿ ವಾಸಮಾಡಿದ್ದನ್ನು ರಾಮಾಯಣದ ಬಾಲಕಾಂಡವು ಸ್ಪಷ್ಟಪಡಿಸುತ್ತದೆ. ಆದುದರಿಂದಲೆ ಈ ಪ್ರದೇಶವು **'ಋಷ್ಯಶೃಂಗಪುರ', 'ಶೃಂಗೇರಿ'** ಮೊದಲಾದ ಹೆಸರುಗಳನ್ನು ಪಡೆದಿದೆ.

ಶ್ರೀಆದಿಶಂಕರರು ಈ ಪಾವನ ಕ್ಷೇತ್ರದಲ್ಲಿ ಒಂದು ಅಪರೂಪದ ದೃಶ್ಯವನ್ನು ಕಂಡರು. ತುಂಗಾನದಿಯ ತೀರದಲ್ಲಿ ತುಂಬು ಗರ್ಭಿಣಿಯಾದ ಒಂದು ಕಪ್ಪೆ, ಬಿಸಿಲಿನ ಬೇಗೆಯನ್ನು ತಾಳದೆ ಬಳಲುತ್ತಿರುವಾಗ ಅದಕ್ಕೆ ಒಂದು ನಾಗರಹಾವು ತನ್ನ ಹೆಡೆಯನ್ನು ಬಿಚ್ಚಿ ನೆರಳು ನೀಡಿತ್ತು. ಸಹಜ ವೈರಿಗಳಾದ ಈ ಪ್ರಾಣಿಗಳು ತಮ್ಮ ಹಗೆತನವನ್ನು ಮರೆತು, ಸ್ನೇಹಭಾವವನ್ನು ಹೊಂದಿರುವುದರಿಂದ ಇದು ತಪೋಭೂಮಿಯಾದ ಉತ್ತಮವಾದ ಪುಣ್ಯಕ್ಷೇತ್ರ ಎಂದು ಭಾವಿಸಿ, ಚತುರಾಮ್ನಾಯ ಪೀಠಗಳಲ್ಲಿ ಮೊದಲನೆಯ ಪೀಠವನ್ನು ಆದಿಶಂಕರರು ಇಲ್ಲಿ ಸ್ಥಾಪಿಸಿ, ಶ್ರೀಚಕ್ರಯಂತ್ರದ ಮೇಲೆ, ಶ್ರೀಶಾರದಾಂಬಿಕೆಯನ್ನು ಪ್ರತಿಷ್ಠಾಪಿಸಿದರು.

## ಶೃಂಗೇರಿ ಮಠದ ಗುರುಪರಂಪರೆ

ಶ್ರೀಶಂಕರಾಚಾರ್ಯರು ಶ್ರೀಸುರೇಶ್ವರಾಚಾರ್ಯರನ್ನು ಶೃಂಗೇರಿ ಶಾರದಾಪೀಠದ ಪ್ರಥಮ ಅಧಿಪತಿಗಳನ್ನಾಗಿ ನಿಯಮಿಸಿದರು. ಇವರು ತಮ್ಮ ಪೂರ್ವಾಶ್ರಮದಲ್ಲಿ 'ಮಂಡನ ಮಿಶ್ರ' ರೆಂಬ ಹೆಸರಿನಿಂದ, ಪೂರ್ವ ಮೀಮಾಂಸಾಶಾಸ್ತ್ರದಲ್ಲಿ ಪಾರಂಗತರಾಗಿದ್ದರು. ಶ್ರೀಶಂಕರಾಚಾರ್ಯರೊಡನೆ ನಡೆದ ವಾದದಲ್ಲಿ ಪರಾಭವಗೊಂಡು, ಅವರಿಗೆ ಶರಣಾಗಿ, ಸಂನ್ಯಾಸಾಶ್ರಮವನ್ನು ಸ್ವೀಕರಿಸಿದರು. ಇವರು ಶ್ರೀಶಂಕರರ ತೈತ್ತಿರೀಯ ಉಪನಿಷದ್ಭಾಷ್ಯ ಮತ್ತು ಬೃಹದಾರಣ್ಯಕ ಉಪನಿಷದ್ ಭಾಷ್ಯಗಳಿಗೆ ವಾರ್ತಿಕಗಳನ್ನು ರಚಿಸಿದ್ದಾರೆ, ಹಾಗೆಯೇ ದಕ್ಷಿಣಾಮೂರ್ತಿ ಸ್ತೋತ್ರ ಮತ್ತು ಪಂಚೀಕರಣಗಳಿಗೂ ವಾರ್ತಿಕಗಳನ್ನು ಬರೆದಿದ್ದಾರೆ. ಇವರು **'ವಾರ್ತಿಕಕಾರ'** ರೆಂದೇ ಪ್ರಸಿದ್ಧರಾಗಿದ್ದಾರೆ. ಇವರ ಸ್ವತಂತ್ರ ಕೃತಿಯಾದ **'ನೈಷ್ಕರ್ಮ್ಯಸಿದ್ಧಿ'** ಎಂಬ ಗ್ರಂಥವು ಅದ್ವೈತಸಿದ್ಧಾಂತದ ವಿಶ್ಲೇಷಣಾ ಗ್ರಂಥವಾಗಿದೆ. ಇವರು ಕ್ರಿ.ಶ. ೮೨೦ ರಿಂದ ೮೩೪ ರವರೆಗೆ ಶೃಂಗೇರಿ ಪೀಠದ ಮಠಾಧಿಪತಿಗಳಾಗಿದ್ದರು.

ವಿಜಯನಗರ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಶ್ರೀವಿದ್ಯಾರಣ್ಯರು ಕ್ರಿ.ಶ. ೧೩೮೦ ರಿಂದ ೧೩೮೬ ರವರೆಗೆ ಶೃಂಗೇರಿ ಶಾರದಾಪೀಠದ ಮಠಾಧಿಪತಿಗಳಾಗಿದ್ದರು. ಶ್ರೇಷ್ಠ ವಿದ್ವಾಂಸರಾಗಿದ್ದ ಅವರು **ಜೀವನ್ಮುಕ್ತಿವಿವೇಕ, ಪಂಚದಶೀ, ಬೃಹದಾರಣ್ಯಕ ವಾರ್ತಿಕಸಾರ, ಅನುಭೂತಿಪ್ರಕಾಶ** ಮುಂತಾದ ಗ್ರಂಥಗಳನ್ನು ರಚಿಸಿದ್ದಾರೆ. ಇವರು **'ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ'** ರೆಂದು ಗೌರವಿಸಲ್ಪಟ್ಟಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ತಮ್ಮ ತಪಶ್ಶಕ್ತಿ ಮತ್ತು ವೈರಾಗ್ಯ ಸಂಪನ್ನತೆಯಿಂದ ಪ್ರಸಿದ್ಧರಾದ ಗುರುಗಳೆಂದರೆ,

ಶ್ರೀ ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳು. ಇವರು ೧೯೧೨ ರಿಂದ ೧೯೫೪ ರವರೆಗೆ ಶೃಂಗೇರಿ ಮಠದ ಅಧಿಪತಿಗಳಾಗಿದ್ದರು. ಶಾಸ್ತ್ರಗಳಲ್ಲಿ ಅಪಾರ ಜ್ಞಾನವನ್ನು ಪಡೆದಿದ್ದ ಇವರು ಉತ್ತಮ ಕವಿಗಳೂ ಆಗಿದ್ದರು. ಅನೇಕ ರೀತಿಯ ಸಮಾಜ ಸೇವಾಕಾರ್ಯಗಳು ಮತ್ತು ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ಪೂಜ್ಯರು, ಶ್ರೀಶಂಕರರ 'ವಿವೇಕಚೂಡಾಮಣಿ'ಗೆ ವ್ಯಾಖ್ಯಾನವನ್ನೂ ಬರೆದಿದ್ದಾರೆ.

ಇವರ ಶಿಷ್ಯರಾದ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು ೧೯೫೪ ರಿಂದ ೧೯೮೯ ರವರೆಗೆ ಶೃಂಗೇರಿ ಶಾರದಾ ಪೀಠವನ್ನು ಅಲಂಕರಿಸಿದ್ದರು. ೩೫ ನೆಯ ಅಧಿಪತಿಗಳಾಗಿದ್ದ ಅವರು ಭಾರತದಾದ್ಯಂತ ಜೈತ್ರಯಾತ್ರೆಯನ್ನು ಮಾಡಿ, ಆಧ್ಯಾತ್ಮಿಕ ಪ್ರಸಾರವನ್ನು ಮಾಡಿದರು. ಅನೇಕ ವಿದ್ಯಾಸಂಸ್ಥೆಗಳನ್ನು, ಸಂಸ್ಕೃತಪಾಠಶಾಲೆಗಳನ್ನು ಹುಟ್ಟುಹಾಕಿದ ಮಹಾಸ್ವಾಮಿಗಳು, ಹಲವಾರು ಭಾಷೆಗಳಲ್ಲಿ ಪತ್ರಿಕೆಗಳನ್ನೂ ಆರಂಭಿಸಿದರು.

ಈಗ ಪೀಠವನ್ನು ಅಲಂಕರಿಸಿರುವ ಪೀಠಾಧಿಪತಿಗಳಾದ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರಿಗೆ ೧೯೮೯ ರಲ್ಲಿ ಪಟ್ಟಾಭಿಷೇಕ ನಡೆಯಿತು. ಇವರು ಶೃಂಗೇರಿ ಗುರುಪರಂಪರೆಯ ೩೬ ನೆಯ ಪೀಠಾಧಿಪತಿಗಳು. ಬಹುಭಾಷಾಪಾಂಡಿತ್ಯವುಳ್ಳ ಇವರು, ಮಾನವ ಕುಲದ ಏಳಿಗೆಗಾಗಿ, ಆಧ್ಯಾತ್ಮಿಕವಾಗಿ, ಶೈಕ್ಷಣಿಕ ವಾಗಿ ಮತ್ತು ಸಾಮಾಜಿಕವಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಮಾರ್ಗದರ್ಶನವನ್ನು ನೀಡುತ್ತಿದ್ದಾರೆ; ನೂತನ ಯೋಜನೆಗಳನ್ನು ವರ್ಷವಿಡೀ ನಡೆಸುತ್ತ ನಾನಾ ರೀತಿಯ ಅತ್ಯುತ್ತಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಶ್ರೀಜಗದ್ಗುರುಗಳು ಅನೇಕ ಪ್ರದೇಶಗಳಲ್ಲಿ ಧರ್ಮಬೋಧನೆಯನ್ನು ಮಾಡುತ್ತಿದ್ದಾರೆ.

## ಶೃಂಗೇರಿಯ ದೇವಾಲಯಗಳು


### ಶ್ರೀಶಾರದಾಂಬಾ ದೇವಾಲಯ

ಶೃಂಗೇರಿಯಲ್ಲಿ ಇರುವ ಬಹಳ ದೇವಾಲಯಗಳಲ್ಲಿ ಶ್ರೀಶಾರದಾಂಬಾ ದೇವಾಲಯವೇ ಪ್ರಧಾನವಾದುದು. ಅಲ್ಲಿನ ಪ್ರಶಾಂತವಾದ ವಾತಾವರಣ ಎಲ್ಲರಿಗೂ ನೆಮ್ಮದಿಯನ್ನು ನೀಡುತ್ತದೆ. ಈ ದೇವಾಲಯವು ನಾಟ್ಟುಕೊಟ್ಟೈ ಎಂಬ ದ್ರಾವಿಡ ಶೈಲಿಯಲ್ಲಿ ನಿರ್ಮಿತವಾಗಿದೆ. ದೇವಾಲಯದ ಒಳಭಾಗದಲ್ಲಿ ಬೆಳ್ಳಿಯ ವ್ಯಾಖ್ಯಾನ ಸಿಂಹಾಸನವಿದೆ. ದೇವಾಲಯದ ಎಡಭಾಗದಲ್ಲಿ ಆದಿಶಂಕರರ ಸನ್ನಿಧಿ ಇದೆ ಮತ್ತು ಅನೇಕ ದೇವತಾಮೂರ್ತಿಗಳೂ ಇವೆ. ಈ ಮಠದ ಪೀಠಾಧಿಪತಿಗಳು, ಶ್ರೀಶಾರದಾಂಬಿಕೆಯ ಅನುಗ್ರಹ ಮತ್ತು ಆಶೀರ್ವಾದವನ್ನು ಪಡೆದ ನಂತರವೇ ಎಲ್ಲಾ ಕಾರ್ಯಕ್ರಮಗಳನ್ನೂ ಮಾಡುತ್ತಾರೆ. 'ಶಾರದಾ' ಎಂಬ ಪದಕ್ಕೆ 'ಶಾರಮ್ – ದ್ಯತಿ – ಖಂಡಯತಿ ಇತಿ ಶಾರದಾ' ಎಂದು ವ್ಯುತ್ಪತ್ತಿ. 'ಶಾರಂ' ಎಂದರೆ ಅಜ್ಞಾನವನ್ನು 'ದ್ಯತಿ' ಎಂದರೆ ನಾಶಮಾಡುವವಳು ಶಾರದಾ. ಇವಳು ಅಜ್ಞಾನವನ್ನು ಹೋಗಲಾಡಿಸಿ, ಜ್ಞಾನವನ್ನು ನೀಡುತ್ತಾಳೆ. ಹೀಗೆ ಶ್ರೀಶಾರದೆ ಪರಬ್ರಹ್ಮದ ಸಗುಣರೂಪವನ್ನು ಪ್ರತಿನಿಧಿಸುತ್ತಾಳೆ.

### ಶ್ರೀವಿದ್ಯಾಶಂಕರ ದೇವಾಲಯ

ಈ ದೇಗುಲವು ಶ್ರೀಚಕ್ರದ ಮೇರು ಪ್ರಸ್ತಾರದಂತಿದೆ. ಇದರ ಬಲಭಾಗದಲ್ಲಿ ಪೂರ್ವಕ್ಕೆ ತುಂಗಾ ನದಿಯು ಪ್ರವಹಿಸುತ್ತದೆ. ಇದು ಕಗ್ಗಲ್ಲಿನಿಂದ ನಿರ್ಮಾಣವಾದುದು. ಈ ದೇವಾಲಯದ ಶಿಲ್ಪಕಲೆ ಅತ್ಯಂತ ವಿಶಿಷ್ಟವಾದುದು.

ಶ್ರೀಜನಾರ್ದನಸ್ವಾಮಿ ದೇವಾಲಯ, ಶ್ರೀನರಸಿಂಹ ದೇವಾಲಯ, ಎಳ್ಳಗ್ಗೆಯ ಶ್ರೀಸೂರ್ಯನಾರಾಯಣ ದೇವಾ


ಶೃಂಗೇರಿಯ ಶಾರದಾಂಬಾ ದೇಗುಲ

ಲಯ, ಶ್ರೀಮಲಹಾನಿಕರೇಶ್ವರ ದೇವಾಲಯ –ಇವುಗಳು ಶೃಂಗೇರಿಯಲ್ಲಿರುವ ಇತರ ದೇವಾಲಯಗಳು.

ಶ್ರೀಶಾರದಾಂಬಿಕೆಗೆ, ನಿತ್ಯವೂ ತ್ರಿಕಾಲಗಳಲ್ಲಿಯೂ ಪೂಜೆಗಳು ನಡೆಯುತ್ತವೆ. ಪ್ರತಿದಿನ ರಾತ್ರಿ ಮಹಾಮಂಗಳಾರತಿಯ ನಂತರ ಅಷ್ಟಾವಧಾನ ಸೇವೆ ನಡೆಯುತ್ತದೆ. (ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ, ಪಂಚಾಂಗ, ಸಂಗೀತ, ನಾದಸ್ವರ, ಸರ್ವವಾದ್ಯ ಸೇವೆಗಳಿಗೆ **ಅಷ್ಟಾವಧಾನ ಸೇವೆ** ಎಂದು ಹೆಸರು).

## ಶೃಂಗೇರಿ ಮಠದ ಚಟುವಟಿಕೆಗಳು

ಈ ಶೃಂಗೇರಿ ಮಠವು, ದೇಶಾದ್ಯಂತ ಸುಮಾರು ಇನ್ನೂರಕ್ಕೂ ಹೆಚ್ಚಿನ ಶಾಖೆಗಳನ್ನು ಪಡೆದಿದೆ. ಇವುಗಳಲ್ಲಿ ಸತತವಾಗಿ ಧಾರ್ಮಿಕ ಚಟುವಟಿಕೆಗಳು ನಡೆಯುತ್ತವೆ. ಶೃಂಗೇರಿಯಲ್ಲಿ ೧೧೦ ವರ್ಷಗಳನ್ನು ಮೀರಿದ ಸಂಸ್ಕೃತ ಮಹಾಪಾಠಶಾಲೆ ಇದೆ. ಇಲ್ಲಿ ವಿದ್ಯಾರ್ಥಿಗಳು ವೇದ, ಶಾಸ್ತ್ರಗಳನ್ನು ಅಧ್ಯಯನ ಮಾಡುತ್ತಾರೆ. ಕಾಲಡಿ, ಬೆಂಗಳೂರು, ಮೈಸೂರು, ಹೈದರಾಬಾದ್, ಸಿದ್ದಾಪುರ, ತಿರುನೆಲ್ವೇಲಿ, ಕೊಯಮತ್ತೂರು ಮೊದಲಾದ ಸ್ಥಳಗಳಲ್ಲಿಯೂ ಈ ಮಠವು ವೇದ ಪಾಠಶಾಲೆಗಳನ್ನು ನಡೆಸುತ್ತಿದೆ. ಈ ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಎಲ್ಲ ಸೌಲಭ್ಯಗಳನ್ನೂ ಉಚಿತವಾಗಿ ಕಲ್ಪಿಸಲಾಗಿದೆ. ಶ್ರೀಮಠದ ಉಸ್ತುವಾರಿಯಲ್ಲಿ ವಿದ್ಯಾಸಂಸ್ಥೆಗಳು ನಡೆಯುತ್ತಲಿದ್ದು, ಅಲ್ಲಿ ನೀಡುವ ಶಿಕ್ಷಣವು ಅತ್ಯುತ್ತಮ ಮಟ್ಟದ್ದಾಗಿದೆ.

ಶ್ರೀಮಠವು ಪ್ರತಿ ತಿಂಗಳು ಒಂದು ಸಾವಿರ ವೇದ ಪಂಡಿತರಿಗೆ ಒಂದು ಸಾವಿರ ರೂಪಾಯಿಗಳ ಸಂಭಾವನೆಯನ್ನು ನೀಡುತ್ತಿದೆ. ಶ್ರೀಗಣಪತಿ ಹಬ್ಬದ ಸಮಯದಲ್ಲಿ, ಹತ್ತು ದಿನಗಳು, ಇಲ್ಲಿ 'ಶ್ರೀಮಹಾಗಣಪತಿ ವಾಕ್ಯಾರ್ಥ ವಿದ್ವತ್ ಸಭೆ' ನಡೆಯುತ್ತದೆ. ಆಗ ಮಠದ ವತಿಯಿಂದ ಶಾಸ್ತ್ರಪಂಡಿತರನ್ನು ಸನ್ಮಾನಿಸುತ್ತಾರೆ. ಶ್ರೀಮಹಾಸ್ವಾಮಿಗಳವರೆ ಸ್ವತಃ ಈ ಸಭೆಯ ಅಧ್ಯಕ್ಷತೆಯನ್ನು ವಹಿಸುತ್ತಾರೆ. ಈ ಮಠವು ಶೃಂಗೇರಿಯಲ್ಲಿ ಶಾರದಾ ಧನ್ವಂತರಿ ಆಸ್ಪತ್ರೆಯನ್ನು ನಡೆಸುತ್ತಿದೆ. ಬೆಂಗಳೂರು, ಹೈದರಾಬಾದ್, ಸೇಲಂ ಮತ್ತಿತರ ಸ್ಥಳಗಳಲ್ಲಿ ಹೊರರೋಗಿಗಳ ಚಿಕಿತ್ಸಾಲಯಗಳನ್ನು ನಡೆಸುತ್ತಿದೆ. ಬೆಂಗಳೂರಿನಲ್ಲಿ ತುಂಬಾ ಕಡಿಮೆ ವೆಚ್ಚಕ್ಕೆ ಡಯಾಲಸಿಸ್ ಮಾಡುವ ಸೌಲಭ್ಯವೂ ಇದೆ.

ನಮ್ಮ ಸನಾತನ ಧರ್ಮ ಮತ್ತು ಶ್ರೇಷ್ಠವಾದ ಸಂಸ್ಕೃತಿಯ ಬಗ್ಗೆ ಅನೇಕ ಗ್ರಂಥಗಳನ್ನು ಮಠದಿಂದ ಪ್ರಕಟಿಸಲಾಗುತ್ತಿದೆ; ವಿವಿಧ ಭಾಷೆಗಳಲ್ಲಿ ಮಾಸಪತ್ರಿಕೆಗಳನ್ನು ಹೊರತರಲಾಗುತ್ತಿದೆ. ಇಲ್ಲಿ ಬರುವ ಭಕ್ತರಿಗೆ, ಮಧ್ಯಾಹ್ನ ಮತ್ತು ರಾತ್ರಿ ಪ್ರಸಾದರೂಪವಾಗಿ ಉಚಿತ ಭೋಜನದ ವ್ಯವಸ್ಥೆ ಮಾಡಲಾಗಿದೆ.

## ಶೃಂಗೇರಿಯಲ್ಲಿ ನಡೆಯುವ ಉತ್ಸವಗಳು

### ಶ್ರೀಶಂಕರ ಜಯಂತಿ ಮಹೋತ್ಸವ

ಪ್ರತಿವರ್ಷವೂ ಶ್ರೀಶಂಕರ ಭಗವತ್ಪಾದಾಚಾರ್ಯರ ಜಯಂತಿ ಉತ್ಸವವನ್ನು ವೈಶಾಖ ಶುಕ್ಲ ಪಾಡ್ಯದಿಂದ ಹಿಡಿದು ಐದು ದಿನಗಳ ಕಾಲ ಆಚರಿಸುತ್ತಾರೆ. ನಿತ್ಯವೂ ಬೆಳಗ್ಗೆ ಅವರ ಸನ್ನಿಧಿಯಲ್ಲಿ ಶತರುದ್ರಾಭಿಷೇಕ, ಸಹಸ್ರನಾಮಾರ್ಚನೆ, ಚತುರ್ವೇದ ಪಾರಾಯಣ, ಪ್ರಸ್ಥಾನತ್ರಯ ಭಾಷ್ಯ, ಶ್ರೀಮಾಧವೀಯ ಶಂಕರ ದಿಗ್ವಿಜಯ, ಸೂತಸಂಹಿತಾ ಮೊದಲಾದ ಕೃತಿಗಳ ಪಾರಾಯಣ, ಮಹಾಮಂಗಳಾರತಿ ಮತ್ತು ಸಂಜೆ, ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಸಮ್ಮುಖದಲ್ಲಿ ಉಪನ್ಯಾಸಗಳು, ರಾಜಬೀದಿಯಲ್ಲಿ ಉತ್ಸವ ಮೊದಲಾದವು ನಡೆಯುತ್ತವೆ.

### ಚಾತುರ್ಮಾಸ್ಯ ವ್ರತ

"ವ್ಯಾಸಪೂಜೆ", "ಗುರುಪೂರ್ಣಿಮಾ" ಎಂದು ಕರೆಯಲಾಗುವ ಆಷಾಢ ಮಾಸದ ಹುಣ್ಣಿಮೆಯ ದಿನ, ಗುರು ಪರಂಪರೆಗೆ ಪೂಜೆಯನ್ನು ಮಾಡುತ್ತಾರೆ. ಆಚಾರ್ಯ ಪರಂಪರೆಯಲ್ಲಿ ಅಗ್ರಗಣ್ಯರಾದ ಶ್ರೀವೇದವ್ಯಾಸರಿಗೆ ವಿಶೇಷವಾದ ಪೂಜೆ ನಡೆಯುತ್ತದೆ. ಚಾತುರ್ಮಾಸ್ಯವು ಮಳೆಗಾಲದ ನಾಲ್ಕು ತಿಂಗಳುಗಳ ಅವಧಿಯಲ್ಲಿ ಆಚರಿಸಲ್ಪಡುವ ವಿಶೇಷ ವ್ರತವಾಗಿದೆ.

### ನವರಾತ್ರಿ ಉತ್ಸವ

ಶ್ರೀಜಗನ್ಮಾತೆಯನ್ನು ನವರಾತ್ರಿಯ ಶರತ್ಕಾಲದಲ್ಲಿ, ವಿಶೇಷವಾಗಿ ಪೂಜಿಸುತ್ತಾರೆ. ನವರಾತ್ರಿಯ ಸಮಯದಲ್ಲಿ ಶೃಂಗೇರಿಯಲ್ಲಿ ವಿವಿಧ ಕಾರ್ಯಕ್ರಮಗಳು ನಡೆಯುತ್ತವೆ. ಶ್ರೀಶಾರದಾಂಬಿಕೆಯನ್ನು ನಾನಾ ವಿಧವಾದ ಆಭರಣಗಳಿಂದ ಅಲಂಕರಿಸುತ್ತಾರೆ. ಈ ಅಲಂಕಾರಗಳಿಂದ ಭೂಷಿತಳಾಗಿ ಶ್ರೀಶಾರದಾಂಬಿಕೆಯು ಭಕ್ತರಿಗೆ ಸುಖವನ್ನು, ಸಂತೋಷವನ್ನು ಕರುಣಿಸಿ, ಅನುಗ್ರಹಿಸುತ್ತಾಳೆ. ಚತುರ್ವೇದ ಪಾರಾಯಣ, ವಾಲ್ಮೀಕಿ ರಾಮಾಯಣ, ದೇವಿ ಭಾಗವತ, ಶ್ರೀಮದ್ಭಾಗವತ, ಲಲಿತೋಪಾಖ್ಯಾನ ಮತ್ತು ಬೇರೆ ಕೆಲವು ಪುಣ್ಯಗ್ರಂಥಗಳ ಪಾರಾಯಣಗಳೂ ಇರುತ್ತವೆ. ಶ್ರೀಶಾರದಾಂಬಿಕೆಗೆ ನಿತ್ಯವೂ ರಾಜಬೀದಿಯಲ್ಲಿ ರಥೋತ್ಸವವು ನಡೆಯುತ್ತದೆ. ಶ್ರೀಮಠದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳೂ ಜರುಗುತ್ತವೆ. ಸಂಗೀತ ಕಾರ್ಯಕ್ರಮಗಳು ಇರುತ್ತವೆ.

ಶ್ರೀಚಕ್ರಮಹಾಯೋಗಪೀಠದಲ್ಲಿ ನೆಲೆಸಿ, ಎಲ್ಲರಿಗೂ ಮಂಗಳವನ್ನು, ಸೌಭಾಗ್ಯವನ್ನು, ನೆಮ್ಮದಿಯನ್ನು ಶಾಂತಿಯನ್ನು, ಸುಖವನ್ನು, ಆನಂದವನ್ನು ವರ್ಷಿಸಿ, ರಕ್ಷಿಸುವ ಲೋಕಜನನಿಯಾದ, ಕರುಣಾಮಯಿಯಾದ ಶ್ರೀಶಾರದಾಂಬಿಕೆಯನ್ನು **"ಶ್ರೀಶಾರದಾಂಬಾಂ ಭಜೇ ಶ್ರಿತಕಲ್ಪವಲ್ಲೀಂ ಕಾರುಣ್ಯವಾರಾಂನಿಧಿಂ ಕಲಿಕಲ್ಮಷಘ್ನೀಂ"**– "ಕಲ್ಪವೃಕ್ಷದಂತೆ ಇರುವವಳೂ, ಕಾರುಣ್ಯವಾರಿಧಿಯೂ, ಕಲಿಯ ಕಲ್ಮಷವನ್ನು ನಾಶಮಾಡುವವಳೂ ಆದ ಶ್ರೀಶಾರದಾಂಬೆಯನ್ನು ಭಜಿಸುತ್ತೇನೆ " ಎಂದು ವಂದಿಸಿ, ಅವಳ ಅನುಗ್ರಹವನ್ನು, ಕಟಾಕ್ಷವನ್ನು ಪಡೆದು, ಅಮೂಲ್ಯವಾದ ಬದುಕಿನ ಸಾರ್ಥಕ್ಯವನ್ನು ಹೊಂದೋಣ.